ಹಿನ್ನೆಲೆಯಲ್ಲಿ ವಚನಕಾರರು ಮತ್ತು ಕುವೆಂಪು ಅವರ ಪ್ರಭಾವ ನಿರ್ಣಾಯಕವಾದುದು. ಜನ ಬದುಕಬೇಕು ಎನ್ನುವುದು ಮೂಲಾಶಯವಾಗದ ಯಾವುದೇ ಕಲಾಪ್ರಕಾರ ಸಾರ್ಥಕವಾಗಲಾರದು ಎನ್ನುವುದರ ಬಗೆಗಿನ ನಂಬಿಕೆಯನ್ನು ಇವರು ಎಂದಿಗೂ ಕಳೆದು ಕೊಳ್ಳಲಿಲ್ಲ. ಈ ನಂಬಿಕೆ ಮತ್ತು 'ಸೌಂದರ್ಯ ಸಮೀಕ್ಷೆ' ( ಕುವೆಂಪು ಅವರ ಮಾರ್ಗದರ್ಶನದಲ್ಲಿ ಜಿಎಸ್ಎಸ್ ಮಂಡಿಸಿದ ಪ್ರೌಢ ಪ್ರಬಂಧದ ಕೃತಿ) ಎರಡೂ ವಿರುದ್ಧ ಧ್ರುವಗಳಾಗಲಿಲ್ಲ. ಸೌಂದರ್ಯ ಮೀಮಾಂಸೆಯನ್ನು ಕುರಿತ ಆಳವಾದ ಅಧ್ಯಯನ ಇವರನ್ನು ಸಾಮಾಜಿಕ ವಾಸ್ತವಗಳಿಗೆ ಕುರುಡಾಗಿಸದೇ ಸೌಂದರ್ಯ ಮೀಮಾಂಸೆಯಾದರೂ ಅಂತಿಮವಾಗಿ ಜನಪರವಾಗಬೇಕಾದ ಅಗತ್ಯವನ್ನು ಮನದಟ್ಟು ಮಾಡಿಸಿತು. ಶಿಷ್ಟ ಮತ್ತು ದೇಸೀ ಪರಂಪರೆಗಳೆರಡರ ಸಹ ಅಸ್ತಿತ್ವವನ್ನು, ಈ ಎರಡರ ಮಿಲನದಲ್ಲಿ ಸೃಷ್ಟಿಯಾಗಿರುವ ಕನ್ನಡ ಜಗತ್ತಿನ ನಕಾಶೆಯ ರಚನೆಯಲ್ಲಿ ಜಿಎಸ್ಎಸ್ ಅವರಿಗೆ ಅಪಾರ ಆಸಕ್ತಿಯಿತ್ತು.

ಜಿಎಸ್ಎಸ್ ಅವರನ್ನು ವಚನಕಾರರ ಮತ್ತು ಕುವೆಂಪು ಅವರ ಪ್ರಭಾವದ ಹಿನ್ನೆಲೆಯಲ್ಲಿ ಗುರುತಿಸುವುದು ಅವರ ಸಾಧನೆ ಮತ್ತು ಪ್ರಯೋಗಗಳನ್ನು ಆ ಪ್ರಭಾವಲಯದಲ್ಲಿ ವಿಲೀನಗೊಳಿಸುವ ದೃಷ್ಟಿಯಿಂದಲ್ಲ. ಜಿಎಸ್ಎಸ್ ಅವರ ಪ್ರಯೋಗಗಳ ಅನನ್ಯತೆಯನ್ನಾಗಲೀ, ಮಹತ್ವವನ್ನಾಗಲೀ ಒಪ್ಪಿಯೇ ಈ ಮಾತನ್ನು ಹೇಳುತ್ತಿದ್ದೇನೆ. ಕನ್ನಡ ವಿವೇಕದ ಆಯಾ ಕಾಲಘಟ್ಟದ ಪ್ರತಿನಿಧಿಗಳನ್ನಾಗಿ ಈ ಎಲ್ಲರನ್ನೂ ನೋಡುವುದು ಕನ್ನಡ ಪರಂಪರೆಯ ಸಾತತ್ಯವನ್ನು ಎತ್ತಿ ಹಿಡಿಯುತ್ತದೆ. ಯಾವುದನ್ನು ಕೇಂದ್ರ ಕಾಳಜಿ ಎಂದು ಗುರುತಿಸುತ್ತಿದ್ದೇವೆಯೋ ಅದು ರೂಪಾಂತರಗಳಲ್ಲಿ ಕಾಣಿಸಿಕೊಳ್ಳುವ ಬಗೆಯನ್ನು ಗುರುತಿಸುವ ಪ್ರಯತ್ನ ಇದು.

**ಸುತ್ತ ಮುತ್ತ ಮನೆಮಠಗಳು ಹೊತ್ತಿಕೊಂಡು**
**ಉರಿಯುವಲ್ಲಿ**
**ಸೋತುಮೂಕವಾದ ಬದುಕು ನಿಟ್ಟುಸಿರೊಳು**
**ತೇಲುವಲ್ಲಿ**
**ಯಾವ ಹಾಡ ಹಾಡಲಿ**
**ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ?**

ಎನ್ನುವುದು ಜಿಎಸ್ಎಸ್ ಅವರ ಘೋಷವಾಕ್ಯವೂ ಹೌದು, ಕನವರಿಕೆಯೂ ಹೌದು. ತುಸು ಉಬಾಯಿಸಿ ಹೇಳುವುದಾದರೆ, ಅವರ ಎಲ್ಲ ಪ್ರಯತ್ನಗಳ ಹಿಂದೆ ಈ ಮಿಡಿತವೊಂದನ್ನು ನಾವು ಸದಾ ಗುರುತಿಸಬಹುದು. ಜನರ ನೋವಿಗೆ ಮಿಡಿವ ಪ್ರಾಣಮಿತ್ರನಾಗಬೇಕಾದ್ದು ಎಲ್ಲ ಪ್ರಜ್ಞಾವಂತರ, ಸಂವೇದನಾಶೀಲರ ಸಹಜ ನಡೆಯಾಗಬೇಕು ಎನ್ನುವುದಾದರೆ, ಕಲಾಜಗತ್ತು ಇದರ ಮುಂದಾಳುವಾಗಬೇಕು ಎನ್ನುವುದು ಇವರ ಬದ್ಧತೆಯಾಗಿತ್ತು. ಶೋಷಿತ ಜಗತ್ತನ್ನು ಕುರಿತಂತೆ ಅಂತಃಕರಣ ಮತ್ತು ಬೌದ್ಧಿಕ ಹೋರಾಟ, ಈ ಎರಡೂ ಒಗ್ಗೂಡದೆ ಯಾವ ಬದಲಾವಣೆಯೂ ಘಟಿಸದು ಎನ್ನುವ ಅರಿವು ಜಿಎಸ್ಎಸ್ ಅವರನ್ನು ಅವರ ಸಮಕಾಲೀನರಲ್ಲಿ ಭಿನ್ನ ಜಾಗ ಮತ್ತು ಎತ್ತರದಲ್ಲಿ ನಿಲ್ಲಿಸುತ್ತದೆ. ಸಾಂಸ್ಕೃತಿಕ ಪಲ್ಲಟದ ಆರಂಭ ಮತ್ತು ಮುಂದುವರಿಕೆ ಕಲೆಯ ಜವಾಬ್ದಾರಿ. ಇದನ್ನೇ ಜಿಎಸ್ಎಸ್ ಅವರ ಕನ್ನಡ ಪ್ರಜ್ಞೆ ಎನ್ನಬಹುದು.

ಈ ಕಾರಣಕ್ಕಾಗಿಯೇ ನನಗೆ ಜಿಎಸ್ಎಸ್ 'ದಲಿತ ಮತ್ತು ಬಂಡಾಯ ಸಾಹಿತ್ಯದ ಮುಂಗೋಳಿ' ಎಂದೂ ಭಾಸವಾಗುತ್ತಾರೆ. ಬಡತನ, ಹಸಿವು, ಜಾತಿವ್ಯವಸ್ಥೆ, ಲಿಂಗತಾರತಮ್ಯವನ್ನು ಕುರಿತಂತೆ ಅವರ ಆಲೋಚನೆ ಮತ್ತು ಬರಹಗಳು ನವೋದಯದವರಿಗಿಂತ ತುಂಬಾ ಭಿನ್ನ. ಉದಾರವಾದಿ ಮಾನವತಾವಾದದ ಮುಂದಿನ ಹಂತವಾಗಿ ಪ್ರಖರ ವೈಚಾರಿಕ ಮತ್ತು ಪ್ರಾಯೋಗಿಕ ನೆಲೆಗಳನ್ನು ಜಿಎಸ್ಎಸ್ ಪ್ರತಿಪಾದಿಸಿದರು. ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಕಾಲಾವಧಿಯನ್ನು ಆ ವಿಭಾಗದ ಸುವರ್ಣ ಯುಗವೆಂದು ಮಾತ್ರವಲ್ಲ, ಅದೊಂದು ಮಾದರಿ ವಿಭಾಗವೂ ಆಗಲು ಸಾಧ್ಯವಾದದ್ದು ಅವರ ಈ ಜನಪರ, ಸೆಕ್ಯುಲರ್ ಮತ್ತು ಮುಕ್ತಮನಸ್ಸಿನ ಕಾರಣದಿಂದಾಗಿ. ಸಿದ್ಧಲಿಂಗಯ್ಯ, ಡಿ.ಆರ್. ನಾಗರಾಜ್, ಕಿ.ರಂ. ನಾಗರಾಜ್, ಕೆ.ವಿ. ನಾರಾಯಣ, ಕಾರ್ಲೋಸ್, ಕೆ.ಎಂ. ಮರುಳಸಿದ್ದಪ್ಪ, ಇವರಲ್ಲಿ ಒಬ್ಬೊಬ್ಬರೂ ಕನ್ನಡ ಸಾಹಿತ್ಯಕ್ಕೆ, ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಕೊಟ್ಟ ಚಲನೆಗಳು ಈಗ ಸ್ಥಾಪಿತವೇ ಆಗಿಹೋಗಿವೆ. ವಿದ್ಯಾರ್ಥಿಗಳಾಗಿದ್ದ ಸಿದ್ಧಲಿಂಗಯ್ಯ ಮತ್ತು ಡಿ.ಆರ್. ನಾಗರಾಜ್